# ಭೃಂಗ ಕಿಂಗ್ ಆಫ್ ಹೇರ್



■ ಸುಮನಾ ಜಿ. ಪ್ರಸಾದ್

ಕಡುಗಪ್ಪಾದ ಸೊಂಪಾದ ತಲೆಗೂದಲು ಎಲ್ಲ ಫ್ಯಾಷನ್‌ಪ್ರಿಯರ ಕನಸು. ತಮಗೆ ಬೇಕಾದ ವಿನ್ಯಾಸದ ಕೇಶಶೈಲಿಗೆ ಆರೋಗ್ಯಕರ ಕೂದಲು ಮುಖ್ಯ. ತಲೆಗೂದಲ ಸ್ವಾಸ್ಥ್ಯ ಸಂರಕ್ಷಣೆ ಕೂಡ ಅತ್ಯಗತ್ಯ. ನೈಸರ್ಗಿಕವಾಗಿ ಸಿಗುವ ಸಸ್ಯಸಂಜೀವಿನಿ ಭೃಂಗರಾಜ ತಲೆಗೂದಲನ್ನು ಕಡುಗಪ್ಪಾಗಿಸುವುದಲ್ಲದೆ ಆರೋಗ್ಯಪೂರ್ಣವಾಗಿ ಇರುವಂತೆ ನೋಡಿಕೊಳ್ಳುತ್ತದೆ.

ಕೇಶ ಕಾಂತಿಗೆ ಉಪಯುಕ್ತವಾದ ಗಿಡ ಈ ಭೃಂಗ. ಎಕ್ಲಿಪ್ಟ ಪ್ರೊಸ್ಟ್ರಾಟ ಎಂಬ ವೈಜ್ಞಾನಿಕ ಹೆಸರು ಹೊಂದಿರುವ ಭೃಂಗರಾಜ ಗಿಡ ಸೂರ್ಯಕಾಂತಿ (ಸನ್‌ಫ್ಲವರ್) ಗಿಡದ ಜಾತಿಗೆ ಸೇರಿದೆ. ಇದನ್ನು ಅಸ್ಸಾಮಿ ಭಾಷೆಯಲ್ಲಿ ಕೆಹ್‌ರಾಜ್, ಕನ್ನಡದಲ್ಲಿ ಭೃಂಗ, ಕೇಶವರ್ಧಿನಿ ಅಥವಾ ಗರುಗ, ತಮಿಳಿನಲ್ಲಿ ಕರಿಸಾಲಂಕನ್ನಿ, ಮಲಯಾಳಂನಲ್ಲಿ ಕಯ್ಯುನ್ನಿ ಎಂದು ಕರೆಯಲಾಗುತ್ತದೆ.

ಕಡು ಹಸಿರು ಬಣ್ಣದ ಸೊಪ್ಪು, ಬಿಳಿ ಬಣ್ಣದ ಹೂವು ಮತ್ತು ಕಂದು ಬಣ್ಣದ ಬೇರುಗಳನ್ನು ಒಳಗೊಂಡ ಇದು ಮಳೆಗಾಲದಲ್ಲಿ ಯಥೇಚ್ಛವಾಗಿ ಬೆಳೆಯುತ್ತದೆ. ಒಂದರಿಂದ ಎರಡು ಅಡಿ ಎತ್ತರ ಬೆಳೆಯುವ ಇದು ಪುಟಾಣಿ ಹೂವುಗಳನ್ನೂ ಬಿಡುತ್ತದೆ.

ತೇವಾಂಶ ಹೆಚ್ಚಿರುವ ಕಡೆಗಳಲ್ಲಿ ಸುಲಭವಾಗಿ ಬೆಳೆಯುವ ಇದು ಉಷ್ಣಾಂಶ ಪ್ರದೇಶದಲ್ಲೂ ವಿರಳವಾಗಿ ಬೆಳೆಯಬಲ್ಲದು. ಭಾರತ, ಚೀನಾ, ಥೈಲಾಂಡ್ ಮತ್ತು ಬ್ರೆಜಿಲ್‌ಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಆಯುರ್ವೇದ ಔಷಧಿಗೆ ಬಳಸುತ್ತಾರೆ. ಕೇಶ ತೈಲಕ್ಕಾಗಿ ಬಳಸುವುದು ಬಹಳ ಹೆಚ್ಚು. ಇದನ್ನು 'ಕಿಂಗ್ ಆಫ್ ಹೇರ್' ಎನ್ನುವುದುಂಟು. ಕಹಿ ರುಚಿ ಹೊಂದಿರುವ ಇದರ ಸೊಪ್ಪು ಮತ್ತು ಕಾಂಡವನ್ನು ಹೆಚ್ಚಾಗಿ ಔಷಧಕ್ಕಾಗಿ ಬಳಸುವುದು ವಾಡಿಕೆ.

ಕೂದಲಿನ ಬೆಳವಣಿಗೆ ಮತ್ತು ಕಡುಗಪ್ಪು ಕೂದಲಿಗೆ ಭೃಂಗ ಬಹಳ ಸಹಕಾರಿ. ಇದರಿಂದ ತಯಾರಿಸಿದ ಎಣ್ಣೆ ನಿಯಮಿತವಾಗಿ ಹಚ್ಚಿದರೆ ಕೂದಲು ಉದುರುವುದಿಲ್ಲ, ಬಣ್ಣ ಕಪ್ಪಾಗುವುದು, ಬಿಳಿ ಕೂದಲಿನ ಸಮಸ್ಯೆ ಅಥವಾ ಅಕಾಲ ಕೂದಲು ನರೆ ಸಮಸ್ಯೆಗೆ ರಾಮಬಾಣ, ಕವಲು ಕೂದಲು, ಕೆಂಚು ಕೂದಲ ಸಮಸ್ಯೆ ಇಲ್ಲ... ಹೀಗೆ ಬಹೂಪಯೋಗಿ ಆಗಿರುವ ಗರುಗ ಮನೆಯ ಹಿತ್ತಲಿನಲ್ಲಿ, ತೋಟದ ಬದಿಗಳಲ್ಲಿ, ಗದ್ದೆಯ ಬದುಗಳಲ್ಲಿ ಬೆಳೆಯುತ್ತದೆ. ಯಾವುದೇ ಗೊಬ್ಬರವನ್ನೂ ಇದು ನಿರೀಕ್ಷಿಸುವುದಿಲ್ಲ. ಕಳೆಯಂತೆ ಕಂಡರೂ ಇದು ಔಷಧೀಯ ಗುಣಗಳ ಗಣಿ.

ಇದರ ಆಯುರ್ವೇದ ಲಾಭವನ್ನು ಪತ್ತೆ ಹಚ್ಚಲು ಇತ್ತೀಚೆಗೆ ಭೃಂಗ ಗಿಡದ ಮೇಲೆ ಹೊಸ ಸಂಶೋಧನೆಯನ್ನು ಆಯುರ್ವೇದ ವೈದ್ಯರು ಮಾಡಿದ್ದಾರೆ. ಕಹಿ ರುಚಿಯನ್ನು ಹೊಂದಿರುವ ಈ ಗಿಡದ ರಸ ಕೂದಲಿನ ಪೋಷಣೆ ಮಾತ್ರವಲ್ಲದೆ ಜೀರ್ಣಕ್ರಿಯೆಗೂ ಸಹಕಾರಿ ಎಂಬ ಅಂಶ ಸಾಬೀತಾಗಿದೆ. ವಾತ, ಕಫ ಮುಂತಾದ ಸಾಮಾನ್ಯ ಸಮಸ್ಯೆಗೂ ಇದು ರಾಮಬಾಣ.

### ಕೇಶ ಕಾಂತಿಗೆ ತೈಲ

ಭೃಂಗರಾಜ ಗಿಡದ ಎಲೆ, ಕೊಬ್ಬರಿ ಎಣ್ಣೆ, ಅಲೊವೆರಾ (ಲೋಳೆಸರ), ಅರಿಶಿಣ ಕೊಂಬು, ಗುಲಾಬಿ ಎಸಳು, ಕಾಯಿ ಹಾಲು, ಪಚ್ಚ ಕರ್ಪೂರ, ತುಳಸಿ ಎಲೆ ಇವಿಷ್ಟನ್ನು ರಸ ಹಿಂಡಿ ಹದವಾದ ಉರಿಯಲ್ಲಿ ಕಾಯಿಸಿ ಮಾಡಿದ ಎಣ್ಣೆಯನ್ನು ದಿನ ನಿತ್ಯ ಬಳಸಿದರೆ ಅಥವಾ ವಾರಕ್ಕೆ ಮೂರು ದಿನವಾದರೂ ಬಳಸುತ್ತಾ ಬಂದರೆ ಕೂದಲು ಸೊಂಪಾಗಿ ಬೆಳೆಯುತ್ತದೆ. ಕೇಶಕಾಂತಿ ವರ್ಧನೆಗೆ ಇದು ಬಹಳ ಪ್ರಯೋಜನಕಾರಿ. ■


ಆರೋಗ್ಯಕರವಾದ ಸವಿಯನ್ನು ಆನಂದಿಸಿ

Along with HERBS
100% NATURAL
ARECA TEA
HEALTHY • TASTY • REFRESHING

ಇತರ ಚಹಾಗಳಿಗಿಂತ ಹೆಚ್ಚಿನ ಆ್ಯಂಟಿಆಕ್ಸಿಡೆಂಟ್ ಗುಣಗಳನ್ನು ಹೊಂದಿದೆ.
ಮಧುಮೇಹ ನಿರ್ವಹಣೆಯಲ್ಲಿ ಸಾಬೀತಾಗಿದೆ.
ಕೊಲೆಸ್ಟ್ರಾಲ್ ಅನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ.
ಶಕ್ತಿಯನ್ನು ಹೆಚ್ಚಿಸುತ್ತದೆ.
ಒತ್ತಡವನ್ನು ನಿವಾರಿಸುತ್ತದೆ.
ದೀರ್ಘಕಾಲೀನ ಬಳಕೆಯಲ್ಲಿ ಸುರಕ್ಷಿತ.




ಆರೋಗ್ಯಕರ • ರುಚಿಕರ • ಉಲ್ಲಾಸಕರ

5 ರುಚಿಕರ ಸ್ವಾದಗಳಲ್ಲಿ ಲಭ್ಯ
ಪುದೀನ, ಶುಂಠಿ, ರೆಗ್ಯುಲರ್,
ನಿಂಬೆ ಮತ್ತು ತುಳಸಿ

WORLD'S FIRST ARECA TEA
INNOVATIVE PRODUCT OF THE YEAR 2015 MAKE IN INDIA EXCELLENCE AWARD
ENTREPRENEURIAL INNOVATION 2017
BEST AGRO FOOD STARTUP 2018

ಪ್ರಮೋಟರ್ಸ್: ಗ್ರೀನ್ ರೆಮೆಡೀಸ್, ಉಡುಪಿ
+91 820 252 9023
ಕಸ್ಟಮರ್ ಕೇರ್ ನಂ:
+91 80 2672 6337 / +91 63610 08174
ಇ ಮೇಲ್: info@arecatea.in
ಆನ್‌ಲೈನ್ ನಲ್ಲಿ ಖರೀದಿಸಿ
amazon | bigbasket | Flipkart
www.arecatea.in ನಲ್ಲೂ ಲಭ್ಯ